ನಂದರು ಹೇಳುವ ತನಕ ಈ ಉದಾತ್ತ ಭಾವನೆಯನ್ನು ಭಾರತದಲ್ಲಿ ಯುಗಯುಗಗಳವರೆಗೆ ಎಂದೂ ಸಮರ್ಪಕವಾಗಿ ಅರ್ಥಮಾಡಿಕೊಳ್ಳಲಿಲ್ಲ, ಬದುಕಿಗೆ ಅನ್ವಯಿಸಲಿಲ್ಲ. ಸಾಂಪ್ರದಾಯಿಕ ದೃಷ್ಟಿಯಲ್ಲಿ ಆತ್ಮನನ್ನು ಕೇವಲ ನಿರ್ಗುಣ, ತಟಸ್ಥ ಎಂದು ಗಣಿಸಲಾಗುತ್ತದೆ; ಅದು ಪರಿವರ್ತನರಹಿತ ಸಾಕ್ಷಿಯಲ್ಲದೆ ಮತ್ತೇನಲ್ಲ. ಸ್ವಾಮೀಜಿಯ ಪಾಲಿಗೆ ಆತ್ಮ ಎಲ್ಲ ಶಕ್ತಿ, ಮಹಿಮೆಗಳ ಆಕರ. ಎಂದರೆ, ಪ್ರತಿಯೊಂದು ವ್ಯಕ್ತಿಯ ಹೃದಯಮಧ್ಯದಲ್ಲಿ ಅನಂತಶಕ್ತಿಯ ಆಕರವಿರುತ್ತದೆ. ಸಾಮಾನ್ಯವಾಗಿ ಇದರ ಅರಿವು ಜನರಿಗಿರುವುದಿಲ್ಲ. ಅದರ ಅರಿವು ಅವರಿಗೆ ಉಂಟಾದರೆ, ಅವರು ಅದನ್ನು ಜಾಗೃತಿಗೊಳಿಸಿಕೊಳ್ಳಬಲ್ಲವರಾದರೆ, ಅವರು ಅನಂತ ಶಕ್ತಿಯನ್ನು ಎಟುಕಿಸಿಕೊಳ್ಳುತ್ತಾರೆ. ಸ್ವಾಮೀಜಿ ಈ ಭಾವನೆಯನ್ನು ತಮ್ಮ ಮದ್ರಾಸ್ ಉಪನ್ಯಾಸವೊಂದರಲ್ಲಿ ಹೀಗೆ ವ್ಯಕ್ತಪಡಿಸಿದರು: "ಪ್ರತಿಯೊಬ್ಬರಿಗೂ ಅವರ ನೈಜ ಸ್ವರೂಪವನ್ನು ಬೋಧಿಸಿ; ನಿಮಗೂ ಬೋಧಿಸಿಕೊಳ್ಳಿ. ಮಲಗಿರುವ ಆತ್ಮವನ್ನು ಕೂಗಿ ಎಬ್ಬಿಸಿ; ಅದು ಹೇಗೆ ಎಚ್ಚರಗೊಳ್ಳುವುದೆಂಬುದನ್ನು ನೋಡಿ. ಈ ಸುಪ್ತ ಆತ್ಮವನ್ನು ಸ್ವಪ್ರಜ್ಞಾತ್ಮಕ ಚಟುವಟಿಕೆಗೆ ಎಚ್ಚರಿಸಿದಾಗ, ಶಕ್ತಿ ಬರುತ್ತದೆ, ಕೀರ್ತಿ ಬರುತ್ತದೆ, ಒಳ್ಳೆಯತನ ಬರುತ್ತದೆ, ಶುದ್ಧಿ ಬರುತ್ತದೆ, ಉತ್ತಮವಾದುದೆಲ್ಲ ಬರುತ್ತದೆ." ನಿಜವಾಗಿಯೂ ಇದೊಂದು ಅದ್ಭುತವಾದ ಭಾವನೆ.

ಆದರೂ, ಈ ವೇದಾಂತ ಬೋಧನೆಯನ್ನು ಅನುಸರಿಸಲಾರದವರಿಗೆ ಶ್ರೀರಾಮಕೃಷ್ಣರು ಮತ್ತು ಶ್ರೀಶಾರದಾದೇವಿಯವರು ಬೇರೊಂದು ಪಥವನ್ನು ತೋರಿಸಿದ್ದಾರೆ: ಅದು ಪ್ರಾರ್ಥನೆಯ ಮತ್ತು ಭಗವಂತನಲ್ಲಿ ವೈಯಕ್ತಿಕ ಶರಣಾಗತಿಯ ಪಥ. ವಿವಿಧ ಮತಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಪರಿಚಿತನಾಗಿರುವ ಪರಮಪುರುಷನೊಬ್ಬನಿದ್ದಾನೆ; ಅವನು ಪರಮಶಕ್ತಿಯ, ಪರಮಪ್ರೇಮ ಆನಂದಗಳ ಆಕರ; ಜನರನ್ನು ರಕ್ಷಿಸಿ ಮುನ್ನಡೆಸುವವನು. ಪ್ರಾರ್ಥಿಸುವುದರಿಂದ ಮತ್ತು ಅವನಿಗೆ ಶರಣಾಗತರಾಗುವುದರಿಂದ, ದಿವ್ಯ ಶಕ್ತಿಯ ಅನಂತವಾದ ಆಕರಕ್ಕೆ ನಾವು ಪ್ರವೇಶ ಪಡೆಯುತ್ತೇವೆ. ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರು ಈ ಭರವಸೆಯನ್ನು ಕೊಟ್ಟಿದ್ದಾರೆ. ವಾಸ್ತವವಾಗಿ ಸ್ವತಃ ಶ್ರೀರಾಮಕೃಷ್ಣರು ಮತ್ತು ಶ್ರೀಶಾರದಾದೇವಿಯವರು ಆಧುನಿಕ ಯುಗದಲ್ಲಿ ಆ ಶಕ್ತಿಯಾಗಿದ್ದಾರೆ. ಅವರಲ್ಲಿ ಆಶ್ರಯ ಪಡೆಯುವವರು ಧನ್ಯರು.

*

## ಕೇಳಿ ತಿಳಿಯಿರಿ

[ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಪೂಜ್ಯ ಸ್ವಾಮಿ ಪ್ರೇಮೇಶಾನಂದರ (೧೮೮೪-೧೯೬೧) ಆಂಗ್ಲ ಭಾಷೆಯ *GO FORWARD* ಗ್ರಂಥವನ್ನು ಆಧರಿಸಿ ಕನ್ನಡದಲ್ಲಿ ನಮ್ಮ ಓದುಗರಿಗೆ ನೀಡುತ್ತಿದ್ದೇವೆ. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ನಮ್ಮ ವಿಳಾಸಕ್ಕೆ ಕಳುಹಿಸಬಹುದು.]

### ೧. ನಮ್ಮ ದೇಶದ ಪ್ರಗತಿಯಲ್ಲಿ ನನ್ನ ಪಾತ್ರವೇನು?

ನಮ್ಮ ದೇಶದ ಜನರಿಗೆ ಮಹತ್ತಿನ ಅರಿವೇ ಇಲ್ಲ. ನೂರರಲ್ಲಿ ಒಬ್ಬ ಯುವಕನಿಗಾದರೂ ಒಂದು ಧ್ಯೇಯವಿರುವುದು ಸಂದೇಹವೇ. ಪ್ರಾಣಿಗಳಂತೆ ಯಾಂತ್ರಿಕವಾಗಿ ಎಲ್ಲರೂ ಜೀವಿಸುತ್ತಿದ್ದಾರೆ. ತಮ್ಮನ್ನು ಉತ್ತಮಗೊಳಿಸಿಕೊಳ್ಳಬೇಕು ಎಂಬ ಹಂಬಲವೇ ಇಲ್ಲ. ಅದಕ್ಕೇ ನಾನು ಹೇಳುವುದು ಜಾಗೃತರಾಗಿ, ನಿಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಿ ಎಂದು. ಯಾವುದೇ ಕೆಲಸ, ಹುದ್ದೆಯಲ್ಲಿದ್ದರೂ, ನಿಮ್ಮ ವಿಶೇಷತೆಯನ್ನು ಪ್ರಕಟಪಡಿಸಲು ಮರೆಯಬೇಡಿ. ಆಗ ಮಾತ್ರ ನಿಮ್ಮ ಜೀವನ ಸಾರ್ಥಕ. ಮುನ್ನಡೆ, ಮುನ್ನಡೆ—ಇದು ನಮ್ಮೆಗಳ ಮಂತ್ರವಾಗಬೇಕು. ಯಾರು ಹೇಗೆ ಉತ್ತಮರಾಗಬೇಕು ಎಂಬುದನ್ನು ತಿಳಿಯುವುದು ಕಷ್ಟ, ಎಲ್ಲರೂ ತಮ್ಮ ತಮ್ಮ ಸಾಮರ್ಥ್ಯವನ್ನು ಉಪಯೋಗಿಸಿ ಮುನ್ನಡೆಯಬೇಕು. ಶ್ರೀರಾಮಕೃಷ್ಣರು 'ಮುಂದೆ ಹೋಗು' ಎನ್ನುವ ಒಂದು ಕತೆಯನ್ನು ಹೇಳುತ್ತಿದ್ದರು. ಸ್ವಾಮಿ ವಿವೇಕಾನಂದರೂ ಹೇಳುತ್ತಿದ್ದರು, "ಸುಪ್ತ ಚೇತನವನ್ನು ಜಾಗೃತಗೊಳಿಸಿದಾಗ ಕೀರ್ತಿ ಬರುವುದು, ಮಹತ್ತು ದೊರೆಯುವುದು, ಪವಿತ್ರತೆ ಬರುವುದು, ಶ್ರೇಷ್ಠವಾಗಿರುವುದೆಲ್ಲವೂ ಬರುವುವು."

ಈ ದೇಶವು ತಮಸ್ಸಿನಿಂದ ತುಂಬಿಹೋಗಿದೆ. ಯಾರಲ್ಲೂ ಉತ್ಸಾಹವೇ ಕಂಡುಬರುವುದಿಲ್ಲ. "ನಮ್ಮ ಊಟ ನಿದ್ರೆಗಳಿಗೆ ವ್ಯವಸ್ಥೆಯಾದರೆ ಅಷ್ಟೇ ಸಾಕು"—ಇದು ನಮ್ಮ ಜನರ ಭಾವನೆ. ಇಲ್ಲಿ ಉಗಿಯಿರಿ ಎಂದು ಯಾರಾದರೂ ಹೇಳಿದರೆ ಅವನಿಗೆ ಅದರಿಂದ ಎಲ್ಲಿ ಸಹಾಯವಾಗಿಬಿಡುವುದೋ ಎಂದು ಹಿಂಜರಿಯುತ್ತೇವೆ! ಯಾವುದಾದರೂ ಕೆಲಸವನ್ನು ಮಾಡೆಂದು ಹೇಳಿದರೆ ಅದನ್ನು ಮೋಸದಿಂದ ಹೇಗೆ ಸಾಧಿಸಬಹುದು ಎಂದೇ ಯೋಚಿಸುತ್ತೇವೆ. ಇಂತಹ ಪರಿಸರದಲ್ಲಿ ಒಳ್ಳೆಯ ಕೆಲಸ ಹೇಗೆ ತಾನೆ ಸಾಧ್ಯ? ಈ ಪರಿಸ್ಥಿತಿಯನ್ನು ಇಂದಿನ ಯುವಜನತೆ ಬದಲಾಯಿಸದಿದ್ದರೆ ನಮ್ಮ ದೇಶ ಮುಳುಗುವುದು ನಿಶ್ಚಿತ. ನಿಮ್ಮ ಹೃದಯವನ್ನು ಸಂಪೂರ್ಣವಾಗಿ ಪರೀಕ್ಷಿಸಿಕೊಂಡು ಈ ಪಿಡುಗುಗಳನ್ನು ತೆಗೆದುಹಾಕಿ.

*